## ಶೂಲಕ್ಕೆ ಏರಿಸುವ ಪರಿ ಎಂದರೆ...

ಇತ್ತೀಚೆಗೆ 'ಸರಿಗಮಪ ಸೀಜನ್15'ರ ಕಾರ್ಯಕ್ರಮದಲ್ಲಿ ಸೀಜನ್14ರ ಸ್ಪರ್ಧಿ ನಿಹಾಲ್ ತಾವ್ರೊ ಅವರ ಸಂಗೀತದ ಒಂದು ಆಲಾಪವನ್ನು ಕ್ರಮವಾಗಿ ನಾಲ್ಕು ಬಾರಿ ಹಾಡಿಸಿದ ಹಂಸಲೇಖ ನೀನು 'ಗಟ್ಟಿ ಕಾಳು' ಎಂಬುದಾಗಿ ಹಾಡಿ ಹೊಗಳಿದರು, ಅಲ್ಲದೆ ಸಂಗೀತ ಕ್ಷೇತ್ರದಲ್ಲಿ ನೀನೊಬ್ಬ ಮಹಾನ್ ಹಾಡುಗಾರ ಎಂಬುದಾಗಿ ಮನಸಾರೆ ಮೆಚ್ಚಿ ಹೊಗಳಿದರು. ಅಂತಹ ಹಾಡುಗಾರನನ್ನು ಸೀಜನ್14ರ ಅಂತಿಮ ಸುತ್ತಿಗೆ ಆಯ್ಕೆ ಮಾಡಲಿಲ್ಲ ಎಂಬುದೇ ನನ್ನ ಮನಸ್ಸಿನ ಕೊರಗು.

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು

## ಡ್ಯಾನ್ಸ್ ಸಮರ ಬೇಕಿಲ್ಲ

ಇತರೇ ಟೀವಿ ವಾಹಿನಿಗಳಿಗೆ ಸ್ಪರ್ಧೆಯೋ ಎಂಬಂತೆ ಚಂದನ ವಾಹಿನಿಯಲ್ಲಿಯೂ 'ಡ್ಯಾನ್ಸ್ ಸಮರ' ಎಂಬ ರಿಯಾಲಿಟಿ ಷೋ ಪ್ರಸಾರವಾಗುತ್ತಿದೆ. ಏಕೋ ಈ ತರಹದ ರಿಯಾಲಿಟಿ ಷೋ ಚಂದನ ವಾಹಿನಿಗೆ ಭೂಷಣವಲ್ಲ. ಜ್ಯೂಸ್ ಅಂಗಡಿಯಲ್ಲಿ ಮದ್ಯ ಸೇವಿಸಿದಂತೆ ಎಂದು ನನ್ನ ಭಾವನೆ.

ಏಪ್ರಿಲ್ 5ರ ಕಂತಿನಲ್ಲಿ 'ಆಪ್ತಮಿತ್ರ' ಸಿನಿಮಾದ ಹಾಡಿಗೆ ಯಕ್ಷಗಾನ ವೇಷಧಾರಿಯನ್ನು ಕುಣಿಸಿದ್ದು ಸರಿಯಲ್ಲ. ಯಕ್ಷಗಾನ ವೇಷ ಹಾಕಿದರೆ ಕುಣಿತ ಕೂಡ ಯಕ್ಷಗಾನ ಶೈಲಿಯಲ್ಲಿರಬೇಕು. ಆದರೆ ಅದು ಹಾಗಿರದೆ ಪಾಶ್ಚಾತ್ಯ ಶೈಲಿಯಲ್ಲಿತ್ತು.

—ಬಿಲ್ಲೇಶ್ವರ ಅಚ್ಚು, ಹುಂಚ

## ಇದು ಯಾವ ಬಗೆಯ ನೃತ್ಯ?

ಇತ್ತೀಚೆಗೆ ಟೀವಿಯಲ್ಲಿ ಕೆಲವು ನೃತ್ಯ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ಅವು ಯಾವ ಬಗೆಯ ನೃತ್ಯಗಳೆಂದೇ ತಿಳಿಯುವುದಿಲ್ಲ. ಭಯಹುಟ್ಟಿಸುವ ಚಿತ್ರವಿಚಿತ್ರ ವೇಷಗಳು, ತಾಳಮೇಳವಿಲ್ಲದ ಕುಣಿತ, ಅಶ್ಲೀಲ ಭಂಗಿಗಳೇ ಈ ನೃತ್ಯದ ವೈಶಿಷ್ಟ್ಯಗಳು. ಈ ನೃತ್ಯಗಳಲ್ಲಿ ನೃತ್ಯದ ಮಾಧುರ್ಯಕ್ಕಿಂತ ಸರ್ಕಸ್ಸಿನ ಕಲಾವಿದರು ಮಾಡುವಂತಹ ಆಕ್ರೊಬ್ಯಾಟಿಕ್ಸ್ ತಂತ್ರಗಳೇ ಹೆಚ್ಚಾಗಿರುತ್ತವೆ. ಭರತನ ನಾಟ್ಯಶಾಸ್ತ್ರ ಹೇಳುವಂತೆ ರಂಗಮಂಚದ ಮೇಲೆ ಅಭಿನಯಿಸುವ ಕಲಾವಿದರು ಸಭೆಗೆ ಬೆನ್ನು ತೋರಿಸಬಾರದೆಂಬ ನಿಯಮವಿದೆ. ಆದರೆ ಈಗಿನ ಹೊಸ ಬಗೆಯ ನೃತ್ಯಗಳಲ್ಲಿ ಕಲಾವಿದರು ನಿಂತುಕೊಳ್ಳುವುದೇ ಸಭೆಗೆ ಬೆನ್ನು ತೋರಿಸಿ, ಇದು ಪಾಶ್ಚಿಮಾತ್ಯರ ಅನುಕರಣೆ. ಈ ಹೊಸ ಬಗೆಯ ನೃತ್ಯಗಳು ನಮ್ಮ ನೃತ್ಯ ಪರಂಪರೆಯನ್ನು ಹಾಳುಗೆಡವುತ್ತಿವೆ.

—ಮುರಲೀಧರ ಕುಲಕರ್ಣಿ, ಬೀದರ್

ವಾರದ ಪತ್ರ

## ತರ್ಕಕ್ಕೆ ಸಿಗದ ವಯಸ್ಸು

'ಮಗಳು ಜಾನಕಿ'ಯ ಸಿಎಸ್ಪಿ ಅವರ ಮಗ ಮಧುಕರ ಅಧ್ಯಾತ್ಮ, ವೇದಾಂತದ ಬೆನ್ನು ಹತ್ತುವುದನ್ನು ಬಿಟ್ಟು ಲೌಕಿಕದೆಡೆಗೆ ಬಂದು ವಕೀಲಿ ವೃತ್ತಿ ಮಾಡಲು ಆರಂಭಿಸಿರುವುದು ಸಂತೋಷ. ಆದರೆ ಆ ಹುಡುಗನ ಪ್ರಾಯದ ಬಗ್ಗೆ ಸ್ವಲ್ಪ ಗಲಿಬಿಲಿಯಾಗುತ್ತದೆ. ಮೇಲಿಂದ ಮೇಲೆ ವೀಕ್ಷಕರಿಗೆ ತಿಳಿದಿರುವ ಹಾಗೆ ಜಾನಕಿಗೆ ಈಗ 22 ವರ್ಷ ( ಚಂದು ಭಾರ್ಗಿ ಅವಳನ್ನು 20 ವರ್ಷ ಸಾಕಿದ್ದಾರೆ). ಜಾನಕಿಯ ತಮ್ಮ ಮಧುಕರನಿಗೆ ಹೆಚ್ಚೆಂದರೆ 21 ವರ್ಷ. ಈ ವಯಸ್ಸಿಗೆ ಕಾನೂನು ಪದವಿ ಅಭ್ಯಾಸ ಮುಗಿಸಿ ಅಧ್ಯಾತ್ಮ ಇತ್ಯಾದಿಗಳಲ್ಲಿ ಸ್ವಲ್ಪ ದಿನದೂಡಿ ಈಗ ಕಂಪನಿಯ ಕಾನೂನು ಸಲಹೆಗಾರನಾಗಿರುವುದು ಸಾಧ್ಯವೇ?

ಇತ್ತೀಚೆಗೆ ರಶ್ಮಿ ಭಾರ್ಗಿ, ಶ್ಯಾಮಲಾ ಅವರಿಗೆ 5 ಕೋಟಿ ರೂ ಹೂಡುವ ಪ್ರಸ್ತಾಪ ಮಾಡಿರುವುದು ಇಂದಿನ ದಿನದಲ್ಲಿ ಅಷ್ಟು ಸೂಕ್ತವಲ್ಲ. ಬೇನಾಮಿ ವ್ಯವಹಾರಗಳ ವಿರುದ್ಧ ಶಾಸನಬದ್ಧ ಕ್ರಮಗಳು ಜಾರಿಗೆ ಬಂದಿರುವಾಗ ಈ ರೀತಿಯ ಸಂದೇಶ ಕೊಡುವುದು ಅಸಮಂಜಸವೆನಿಸುತ್ತದೆ.

—ಎಂ.ಜಿ. ಶ್ರೀನಾಥ್ ಮೈಸೂರು

## ಸಕಾಲಿಕ ಸಂದರ್ಶನ

ಅತಿ ಜನಪ್ರಿಯವಾಗುತ್ತಿರುವ 'ಚಂದನ'ದಲ್ಲಿ ಏಪ್ರಿಲ್ ಒಂದರಂದು ರಾತ್ರಿ ವಿಠ್ಠಲ ಭಂಡಾರಿ ಅವರು ನಡೆಸಿದ್ದ ಬಿ.ಎ. ಸನದಿ ಅವರ ಜತೆಗಿನ ಸಂಪಾದಿತ ಸಂದರ್ಶನ ನಿಜಕ್ಕೂ ವಿಶೇಷವಾಗಿತ್ತು. ಹಿಂದಿನ ದಿನವಷ್ಟೇ ಅವರು ತೀರಿ ಹೋಗಿದ್ದರು. ಸಕಾಲಿಕವಾದ ಅವರ ಈ ಸಂದರ್ಶನದಿಂದ ಅವರ ಬಗ್ಗೆ ಹಲವು ವಿಷಯಗಳು ತಿಳಿಯಲು ಸಾಧ್ಯವಾಯಿತು.

—ನಾರಾಯಣ ಯಾಜಿ, ಶಿರಾಲಿ

## ಜವಾಬ್ದಾರಿ ಮರೆತರೆ ಹೇಗೆ?

ವಾಹಿನಿಗಳು ಕೊಟ್ಟಿದ್ದೇ ಮನೋರಂಜನೆ ಎಂಬ ಗೀಳಿನಿಂದ ವರ್ತಿಸುತ್ತಿವೆ. ಹಿಂದೆ ಝೀ ಕನ್ನಡದ ಸರಿಗಮಪ ಕಾರ್ಯಕ್ರಮದ ನಿರೂಪಕಿಯ ವರ್ತನೆಗಳು ಕಟು ಟೀಕೆಗೆ ಒಳಗಾಗಿದ್ದವು. ಆದರೂ ಇಂತಹ ಕಾರ್ಯಕ್ರಮಗಳು ಮುಂದುವರೆದಿವೆ. ಮಂಡ್ಯದಲ್ಲಿ ಮಾತ್ರ ಚುನಾವಣೆ ನಡೆಯುತ್ತಿದೆಯೋ ಎಂಬಂತೆ ಅದನ್ನೇ ಸುದ್ದಿ ವಾಹಿನಿಗಳಲ್ಲಿ ವಿಜೃಂಭಿಸಲಾಗುತ್ತಿದೆ. ಈ ಕಾರ್ಯಕ್ರಮದ ನಂತರ ಉಳಿದ ಸಮಯ ಝೀ ಸರಿಗಮಪದ ಹಾಡುಗಾರ ಹನುಮಂತನ ಕುರಿತಾಗಿದೆ. ಇದಂತೂ ಜಗಿದೂ ಜಗಿದೂ ಸವಿ ಇಲ್ಲದ ಬಬಲ್‌ಗಮ್‌ನಂತಾಗಿದೆ. ಈ ತಲೆಚಿಟ್ಟು ಹಿಡಿಸುವ ಕಾರ್ಯಕ್ರಮವನ್ನು ಯಾರೂ ನೋಡುತ್ತಾರೋ ದೇವರೇ ಬಲ್ಲ. ಈ ಮಧ್ಯೆ ಕಾಲವಶರಾದ ಬಿ.ಎ. ಸನದಿಯವರ ಬಗೆಗೆ ಯಾರೂ ಮಾಹಿತಿಯನ್ನು ಕೊಡಲಿಲ್ಲ. (ಚಂದನ ಹೊರತುಪಡಿಸಿ). ಇದು ಕನ್ನಡೇತರರೇ ಹೆಚ್ಚಾಗಿ ನಡೆಸುತ್ತಿರುವ ಕನ್ನಡ ವಾಹಿನಿಗಳ ದುಸ್ಥಿತಿ ಮತ್ತು ಕನ್ನಡ ಸಾಂಸ್ಕೃತಿಕ ಲೋಕದ ಅಧೋಗತಿ.

—ಮಧುಸೂದನ್ ಬಯಸ್, ಬೆಂಗಳೂರು

## ಆಮೆ ನಡಿಗೆಯ ಜಾನಕಿ

ಸಿಎಸ್ಪಿ ವಿದೇಶಕ್ಕೆ ಹೋದ ನಂತರ ಧಾರಾವಾಹಿ ಆಮೆ ವೇಗದಲ್ಲಿ ಸಾಗುತ್ತಿದ್ದು ಬೇಸರ ತರಿಸುತ್ತಿದ್ದಾಗ, ಇದ್ದಕ್ಕಿದ್ದಂತೆ ವೇಗ ಪಡೆದಿದೆ. ನಿರಂಜನ ಹಾಗೂ ಅವನ ಮನೆಯವರ ಸಮಸ್ಯೆಗಳಿಗೆಲ್ಲ ಪರಿಹಾರ ದೊರಕಿ, ಜಾನಕಿಗೂ ಜೀವನದಲ್ಲಿ ಒಂದು ಗುರಿ ಸಿಕ್ಕಿ, ಮಧುಕರನ ಮದುವೆಗೆ ಇದ್ದ ತೊಂದರೆಯೂ ಬಗೆಹರಿಯುವ ಸೂಚನೆ ಸಿಗುತ್ತಿದೆ. ಇಷ್ಟೂ ಸಾಲದು ಎಂದು ಚಿಕ್ಕವಯಸ್ಸಿನಲ್ಲಿ ಜಾತ್ರೆಯಲ್ಲಿ ಕಳೆದು ಹೋಗಿದ್ದ ಶ್ಯಾಮಲತ್ತೆಯ ಮಗಳು ಧಾತ್ರಿ ಪೊಲೀಸ್ ಅಧಿಕಾರಿ ಮೈತ್ರಿಯ ರೂಪದಲ್ಲಿ ಇನ್ನೇನು ಪ್ರತ್ಯಕ್ಷವಾಗಲಿದ್ದಾಳೆ. ಅಂತೂ ಸಿಎಸ್ಪಿ ಸಾರ್ 'ನೆದರ್‌ಲೆಂಡ್ಸ್'ನಿಂದ ಮರಳುವಷ್ಟರಲ್ಲೇ ಎಲ್ಲ ಸಮಸ್ಯೆಗಳೂ ಬಗೆಹರಿಯುವಂತಿದೆ.

ಇನ್ನೇನಿದ್ದರೂ ಮುಂದೆ ನಮ್ಮ ಭಾರ್ಗಿ ಸಾಹೇಬರ ತೀಕ್ಷ್ಣ ನೋಟ, ಚತುರ ಚದುರಂಗದಾಟ, ಎಲ್ಲರಿಗೂ ಕಾಟ. ಆಗಲೇ ಅಲ್ಲವೇ ಇರುವುದು ಸ್ವಾರಸ್ಯ?

—ಮೀರಾ ಮೋಹನ್, ಬೆಂಗಳೂರು

ಕಾಲ ಹರಣ: ಜಾನಕಿ ಪ್ರಾರಂಭವಾದಾಗ ಬಹಳವೇ ಚೆನ್ನಾಗಿತ್ತು. ಈಗೀಗ ಮಿಕ್ಕ ಧಾರಾವಾಹಿಗಳ ತರಹ ಇದೂ ಗುರಿಯಿಲ್ಲದೆ ನಡೆಯುತ್ತಿದೆ. ಕಾಫಿ ಮಾಡುವ ರೀತಿ, ತಿಂಡಿ ಮಾಡುವ ವಿಧಾನ, ಮದುವೆ ಮಾಡುವ ಸಾಧ್ಯತೆ ಇದರಲ್ಲಿಯೇ ಕಾಲ ಕಳೆಯುತ್ತಿದೆ.

—ಸೀತಾರಾಂ ಹೆಗ್ಗಡೆ

## ಸ್ವಾದವಿಲ್ಲದ ಕತೆ

ಝೀ ಕನ್ನಡದ 'ಸುಬ್ಬಲಕ್ಷ್ಮೀ ಸಂಸಾರ'ದಲ್ಲಿ ಯಾವುದೇ ಆಕರ್ಷಣೆ ಉಳಿದಿಲ್ಲ ಮತ್ತು ಸುಮ್ಮನೆ ಕಥೆಯನ್ನು ಎಳೆಯುತ್ತಿದ್ದಾರೆ. ತನ್ನ ಮಗನೇ ತನ್ನ ಜೀವ ಎನ್ನುತ್ತಿದ್ದ ಸುಬ್ಬಲಕ್ಷ್ಮಿ, ಮಗ ಅಥರ್ವ ಸದ್ಯಕ್ಕೆ ಎಲ್ಲಿ ಹೋಗಿದ್ದಾನೆ ಕಾಣಿಸುತ್ತಿಲ್ಲವಲ್ಲ?

—ಎಸ್. ವಿಜಯಕುಮಾರಿ, ಬೆಂಗಳೂರು